# ಶ್ರೀಪಾದರಾಜಕೃತ  ಉಗಾಭೋಗಗಳು

೧.  ಮನೆಯಿಂದ ಸಂತೋಷ ಕೆಲವರಿಗೆ ಲೋಕದೊಳು
ಧನದಿಂದ ಸಂತೋಷ ಕೆಲವರಿಗೆ ಲೋಕದೊಳು
ವನಿತೆಯಿಂದ ಸಂತೋಷ ಕೆಲವರಿಗೆ ಲೋಕದೊಳು
ತನಯರಿಂದ ಸಂತೋಷ ಕೆಲವರಿಗೆ ಲೋಕದೊಳು
ಇನಿತು ಸಂತೋಷ ಅವರವರಿಗಾಗಲಿ ನಿನ್ನ
ನೆನೆವೋ ಸಂತೋಷ ಎನಗಾಗಲಿ ನಮ್ಮ ರಂಗವಿಟ್ಟಲ ॥

೨.  ಧ್ಯಾನವು ಕೃತಯುಗದಿ
ಯಜನ ಯಜ್ಞವು ತ್ರೇತಾಯುಗದಿ
ಧಾನವಂತಕನ ದೇವತಾರ್ಚನೆ ದ್ವಾಪರಯುಗದಿ
ಆ ಮಾನವರಿಗೆಷ್ಟು ಫಲವೊ ಅಷ್ಟು ಫಲವು
ಕಲಿಯುಗದಿ ಗಾನದಲಿ ಕೇಶವಯೆನಲು
ಕೈಗೊಡುವನು ರಂಗವಿಟ್ಟಲ ।

೩.  ಕಲಿಕಾಲಕೆ ಸಮಯುಗವಿಲ್ಲವಯ್ಯ
ಕಲುಷಹರಿಸಿ ಕೈವಲ್ಯನೀವುಧಯ್ಯಾ
ಸಲೆ ನಾಮ ಕೀರ್ತನೆ ಸ್ಮರಣೆ ಸಾಕಯ್ಯ
ಸ್ಮರಿಸಲು ಸಾಯುಜ್ಯ ಪರವೀವುದಯ್ಯ
ಬಲವಂತ ಶ್ರೀರಂಗವಿಟ್ಟಲನ ನೆನೆದರೆ
ಕಲಿಯುಗವೇ ಕೃತಯುಗವಾಗುವುದಯ್ಯ ॥

೪. ಬಲ್ಲವನು ಉಳ್ಳವನು ನೀನಿರಲು ಭಜಿಸದೆ
ಕ್ಷುಲ್ಲಕರ ಮತವಿಡಿದು ಸುಖವ ಬಯಸುವೆ ನಾನು
ಕಲ್ಲು ಗೋವಿನ ಹಾಲು ಕರು ಬಯಸಿದಂತೆ ನಾ
ಹಲ್ಲು ಹೋಗುದನರಿಯೆ ಅಕಟಕಟ ಮಂದಮತಿಯು
ಕಳ್ಳಗೋವನು ಹುಲ್ಲು ಗಂಜಿಯನೆರೆದು ಸಲಹಿದೆಡೆ ಏನು ಫಲ
ಬಲ್ಲಿದಾಸೆಯು ಬಿಡಿಸೋ ನಮೋ ರಂಗವಿಟ್ಟಲ ।

೫. ಎನ್ನ ಮನ ವಿಷಯಂಗಳಲಿ ಮುಳುಗಿತೊ
ಎನ್ನ ತನುವು ವೃದ್ದಾಪ್ಯ ಐದಿತೊ
ಅಂತಕರ ಕರೆ ಬಾಹೋ ಹೊತ್ತಾಯಿತೊ
ಕಾಲ ವಿಳಂಬನ ವಿನಿತಿಲ್ಲವಯ್ಯ
ವ್ಯಾಳೆ ಅರಿತು ಬಿನ್ನಹ ಮಾಡಿದೆ
ಹೀಗೆ ತರಳರ ಬಿದುವ ತಾಯಿಗಳುಂಟೆ – ನೀ
ಕರುಣಾನಿಧಿಯೆಂಬ ಬಿರುದು ಸಲ್ಲದು ದೇವ
ಕರುಣಾಕರ ಸಿರಿರಂಗವಿಠಲರೇಯ – ನೀ
ಕರುಣಾನಿಧಿಯೆಂಬ ಬಿರುದು ಸಲ್ಲದು ದೇವ ॥

೬. ಕಂಬಳಿಯ ಬುತ್ತಿಯಲಿ ಕಸವನಾರಿಸುವರುಂಟೆ
ಅಂಬುಜೋದರನ ನೆಲೆ ಅರಿಯದ ದುರಾತುಮರು
ಬೆಂಬಿಡದೇ ಸುಖನರಸುವರುಂಟೆ ಉದ–
ರಂಬರದಿ ಡಂಭಕರು ಇಹಪರಕೆ ಬಾಹ್ಯರೆಂದು
ಶಂಬರಾಂತಕ ಪಿತ ರಂಗವಿಠಲರೇಯನ್ನ ಪಾ–
ದಾಂಬುಜೋದ್ಭ್ರಮರುದೊಳುಮಿಗೆ ದೂರರಾದವರು
ಬೆಂಬಿಡದೆ ಸುಖವನರುವರುಂಟೆ ॥

೭. ಕರುಣದಿ ತನುಮನಧನಂಗಳೆಲ್ಲವು
ನಿನ್ನ ಚರಣಕಮಲಕೊಪ್ಪಿಸಿದ ಬಳಿಕ
ಮರಳಿ ಎನ್ನ ಮರುಳು ಮಾಡುವರೆ
ಸರಕು ಒಪ್ಪಿಸಿದ ಮೇಲೆ ಸುಂಕವುಂಟೆ ದೇವಾ
ಕರುಣಾಕರ ನಿನ್ನ ಚರಣದಡಿಯೊಳಿಟ್ಟು ಕಾಯೊ ॥

೮. ಹರಿಭಕುತನಾದವ ಅರಿತು ಪಾಪವ ಮಾಡುವುದಿಲ್ಲ
ಅರಿಯದೆ ಮಾಡಿದರೆ ಹರಿಯು ಎಣಿಸುವುದಿಲ್ಲ
ಶರಣು ಬಂದವನ ರವಿಯತನಯನ ನೋಡು
ಮರೆಯದೆ ಭಜಿಸೊ ರಂಗವಿಠಲರೇಯನ ॥

೯. ಅನಂತಕಾಲದಲ್ಲಿ ಯಾವ ಪುಣ್ಯದಲ್ಲಿ
ಎನ್ನ ಮನ ನಿನ್ನಲ್ಲಿ ಎರಗಿಸೊ
ಎನ್ನ ಮನವನು ನಿನ್ನ ಚರಣದೊಳೊಮ್ಮೆ
ಇಟ್ಟು ಸಲಹೊ ರಂಗವಿಠಲ ।

೧೦. ಭವವೆಂಬ ಅಡವಿಯಲ್ಲಿ ತಾಪತ್ರಯದಿ ಸಿಲುಕಿ
ಭಯಗೊಳ್ಳದಂತೆ ಗೆಲ್ಲುವುದಕೆ ಶ್ರೀಹರಿನಾಮ
ಹೊರತಾಗಿ ಮತ್ತುಂಟೆ ಎನ್ನ ಮನವ ನಿನ್ನ
ಚರಣದಲ್ಲಿಟ್ಟು ಸಲಹೊ ನಮ್ಮ ರಂಗವಿಠಲ ।

೧೧.     ಮುಂದೆ ಕೆಟ್ಟು ಬಂದವರ
ಹಿಂದಕೆ ಹಾಕಿಕೊಂಡ ಬಳಿಕ
ಬಂದ ಗುಣದೋಷಗಳ ಎಣಿಸುವರೆ ಎಲೆ ದೇವಾ ।
ಅಂದವಲ್ಲ ನಿನ್ನ ಘನತೆಗೆ
ತಂದೆತಾಯಿಗಳು ತಮ್ಮ
ಕಂದನವಗುಣಗಳೆಣಿಸುವರೆ?
ಎಂದೆಂದಿಗೆನ್ನ ಉದ್ಧರಿಸಬೇಕೆಲೆ ದೇವ
ಸಂದೇಹವ್ಯಾತಕೆ ನವೋ ರಂಗವಿಠಲಯ್ಯ ।

೧೨.     ಮಾರಿಕೋಣನಂತೆ ಠೋರ ಭಾಗ್ಯವ ಕೊಟ್ಟು
ನರಕಕ್ಕೆ ಇಡುವನೋ ದುರ್ಜನರುಗಳನು
ಸಾರ ಭಕುತರಿಗೆ ದಾರಿದ್ರ್ಯಾದಿಗಳನ್ನು ಕೊಟ್ಟು
ಪಾರುಗಾಣಿಸುವನು ರಂಗವಿಠಲರೇಯ ।

೧೩.     ಅಂಬರದಾಳವನು ಇನಶಶಿಗಳಲ್ಲದೆ
ಅಂಬರತಳದಲಾದುವ ಪಕ್ಷಿ ತಾವು ಬಲ್ಲವೆ?
ಜಲದ ಪ್ರಮಾಣವ ತಾವರೆಗಳಲ್ಲದೆ
ಮೇಲಿದ್ದ ಮರಗಿಡಬಳ್ಳಿಗಳು ತಾವು ಬಲ್ಲವೇ?
ಮಾವಿನ ಹಣ್ಣಿನ ರುಚಿ ಅರಗಿಳಿಗಳಲ್ಲದೆ
ಚೀರ್ವ ಕಾಗೆಗಳು ತಾವು ಬಲ್ಲವೇ?
ನಿನ್ನ ಮಹಿಮೆ ನಿನ್ನ ಭಕ್ತರು ಬಲ್ಲರು –
ಮತ್ತನ್ನ್ಯರೇನು ಬಲ್ಲರಯ್ಯ?
ಭಕ್ತರಾಧೀನನೆ ಭಕ್ತರೊಡೆಯನೆ
ಭಕ್ತರ ಸಲಹಯ್ಯ ನವೋ ರಂಗವಿಠಲಯ್ಯ ।

೧೪.	ಭವವೆಂಬ ಅಡವಿಯಲ್ಲಿ ತಾಪತ್ರಯದಿ ಸಿಲುಕಿ
ಭಯಗೊಳ್ಳದಂತೆ ಗೆಲ್ಲುವುದಕೆ ಶ್ರೀಹರಿನಾಮ
ಹೊರತಾಗಿ ಮತ್ತುಂಟೆ ಎನ್ನ ಮನವ ನಿನ್ನ
ಚರಣದೊಳಿಟ್ಟು ಸಲಹೊ ನಮ್ಮ ರಂಗವಿಠಲ ।

೧೫.	ಬರುವುದು ಬುದ್ದಿಯು ಬಲವು ಕೀರುತಿಯು
ನಿರುತದಿ ಧೈರ್ಯವು ನಿರ್ಭಯತ್ವವು
ಅರೋಗಾನಂದ ಅಜಾಡ್ಯ ವಾಕ್ಪಟುತ್ವವು
ಹರೇ ರಂಗವಿಠಲ ಹನುಮಾ ಎನಲು ।

೧೬.	ಸಾಲಿಗ್ರಾಮ ವೃಂದಾವನದಲಿ ಇಪ್ಪಂತೆ
ಎನ್ನ ಮನವನು ಬಿಡದಿಹ ಹರಿ
ಜನ್ನರ ಜನ್ನ ನರಹರಿ ಗೋವಿಂದ
ಎನ್ನ ಮನವನು ಬಿಡದಿಹ ಪುಂಡರೀಕ
ಮನ ಪಿರಿಯಾನೆಯಯ್ಯ
ಪಂಡರಂಗಿಪುರೀಪತಿ ಸಿರಿರಂಗವಿಠಲ ।